ಮೂಲ ದಾವಾ ಸಂಖ್ಯೆ. 111/2023 ಪಿ ಡಬ್ಲ್ಯೂ 3

(ದಿನಾಂಕ 18-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜೆ ಎನ್ ಕೆ ವಕೀಲರಿಂದಃ-

ನಾನು ವ್ಯವಸಾಯ ಮಾಡುತ್ತೇನೆ. ನನಗೆ ಈ ದಾವೆಯ ವಾದಿಯರು ಮತ್ತು ಪ್ರತಿವಾದಿಯರು ಗೊತ್ತು. ವಾದಿಯರು ಈ ದಾವೆಯನ್ನು ಪ್ರತಿವಾದಿಯ ಮೇಲೆ ಯಾವ ಕಾರಣಕ್ಕೆ ಹಾಕಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿರುವ ವಿಚಾರ ನನಗೆ ಗೊತ್ತು.ನಾನು ದಾವಾಸ್ತಿಯನ್ನು ನೋಡಿದ್ದೇನೆ. ದಾವಾಸ್ತಿಯ ಸರ್ವೆ ನಂ. 219 ಇರಬೇಕು. ದಾವಾಸ್ತಿಯು ಒಟ್ಟು 12 ಎಕರೆ ಇರುತ್ತದೆ. ದಾವಾಸ್ತಿಯಲ್ಲಿ ಒಂದು ದೊಡ್ಡ ಬಾವಿ ಇದೆ ಎಂದರೆ ಸರಿ. ದಾವಾಸ್ತಿಯ ಪೂರ್ವ ದಿಕ್ಕಿಗೆ ಒಂದು ದೊಡ್ಡ ಒಡ್ಡು ಇದೆ ಎಂದರೆ ಸರಿ. ಸದರಿ ಒಡ್ಡು ಬಹಳ ಹಳೇ ಕಾಲದ್ದು ಎಂದರೆ ಸರಿ. ಸದರಿ ಒಡ್ಡಿನ ಮೇಲೆ ಹಳೇ ಕಾಲದ ಮರಗಳು ಇವೆ ಎಂದರೆ ಸರಿ. ಸದರಿ ಗಿಡಗಳನ್ನು ಯಾರೂ ಕಡಿದಿಲ್ಲ ಅವು ಹಾಗೇ ಇರುತ್ತವೆಂದರೆ ಸಾಕ್ಷಿಯು ಈಗ ಅದನ್ನು ನೋಡಿಲ್ಲ ನಾನು ಹಿಂದೆ ನೋಡಿದ್ದು ಇರುತ್ತದೆನ್ನುತ್ತಾರೆ.

ನಿಮ್ಮ ಸಾಕ್ಷಿ ಪ್ರಮಾಣಪತ್ರದಲ್ಲಿ ವಾದಿಯರು ಸರ್ವೆಗಾಗಿ ಅರ್ಜಿ ನೀಡಿದ್ದರು ಸರ್ವೆ ಅಧಿಕಾರಿಗಳು ಅಳತೆಗಾಗಿ ಬಂದಿದ್ದರು ಅಂತಾ ಹೇಳಿದ್ದು ಆ ಸಮಯದಲ್ಲಿ ನೀವು ಹಾಜರಿದ್ರಾ ಎಂದರೆ ಇಲ್ಲ. ಪ್ರತಿವಾದಿಯು ವಾದಿಯ ಜಮೀನನ್ನು ಒತ್ತುವರಿ ಮಾಡಿರುತ್ತಾರಂತಾ ನಿಮ್ಮ ಸಾಕ್ಷಿ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿದ್ದು ಆ ವಿಚಾರ ನಿಮಗೆ ಹೇಗೆ ಗೊತ್ತು ಎಂದರೆ ಸಾಕ್ಷಿಯು ಅಳತೆ ಮಾಡಿದಾಗ ನನಗೆ ಸರ್ವೆಯರ್ ಹೇಳಿದ್ದರು ಎನ್ನುತ್ತಾರೆ. ನಾನು ಸರ್ವೆಯರ್ ನೀಡಿರುವಂತಹ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಪ್ರತಿವಾದಿಯು ವಾದಿಯರ ಜಮೀನನ್ನು ಒತ್ತುವರಿ ಮಾಡಿಲ್ಲ ಪ್ರತಿವಾದಿಯು ತನ್ನ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾನೆಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ವಾದಿಯ ಜಮೀನನ್ನು ಒತ್ತುವರಿ ಮಾಡಿದ್ದು ಹಿರಿಯರು ಪ್ರತಿವಾದಿಗೆ ವಾದಿಯ ಜಮೀನನ್ನು ಬಿಟ್ಟುಕೊಡಿ ಅಂತಾ ಹೇಳಿದ್ರು ವಾದಿಗಳಿಗೆ ಜಮೀನು ಮರಳಿ ಕೊಟ್ಟಿರುವುದಿಲ್ಲ ಅಂತಾ ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಯರು ವಾದಿಯ ಜಮೀನನ್ನು ಒತ್ತುವರಿ ಮಾಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ ವಾದಿಯರು ಬೇಕಾದವರು ಎಂದರೆ ಸಾಕ್ಷಿಯು ನನಗೆ ಎಲ್ಲರೂ ಬೇಕಾದವರು ಎನ್ನುತ್ತಾರೆ. ವಾದಿಯರು ನನಗೆ ಆತ್ಮೀಯರಾಗಿರುವುದರಿಂದ ಅವರ ಪರವಾಗಿ ನಾನು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ